ಅ) ಹೌದು, ಬಳ್ಳಾರಿ ಜಿಲ್ಲೆ ಕುರಿಕೊಪ್ಪದಲ್ಲಿ ಹೈನುಗಾರಿಕೆ ಮಹಾವಿದ್ಯಾಲಯ ಸ್ಥಾಪಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಜಿಲ್ಲೆಗಳ ಮತ್ತು ತಾಲ್ಲೂಕುಗಳ ಪುನರ್ - ವಿಂಗಡಣೆ.

1599 - ಶ್ರೀ ಕೆ. ಅಮರನಾಥ ಶೆಟ್ಟಿ (ಮೂಡಬಿದರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲೆಗಳ ಮತ್ತು ತಾಲ್ಲೂಕುಗಳನ್ನು ಪುನರ್-ವಿಂಗಡಣೆ ಮಾಡುವ ಬಗ್ಗೆ ಹುಂಡೇಕರ್ ಸಮಿತಿ, ವಾಸುದೇವರಾವ್ ಸಮಿತಿ ಮತ್ತು ಗದ್ದೀಗೌಡರ್ ಸಮಿತಿಗಳು ಮಾಡಿರುವ ಮುಖ್ಯ ಶಿಫಾರಸ್ಸುಗಳು ಯಾವುವು?

ಆ) ಮೇಲ್ಕಂಡ ಸಮಿತಿಗಳು ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುಗಳನ್ನು ಪುನರ್- ವಿಂಗಡಣೆ ಮಾಡಬೇಕೆಂದಾಗಲಿ ಅಥವಾ ಜಿಲ್ಲೆಯನ್ನು ವಿಭಜನೆ ಮಾಡಬೇಕೆಂದಾಗಲೀ ಶಿಫಾರಸ್ಸುಗಳಲ್ಲಿ ತಿಳಿಸಲಾಗಿದೆಯೇ?

ಇ) ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುಗಳನ್ನು ಪುನರ್-ವಿಂಗಡಣೆ ಮಾಡಬೇಕೆಂದು ಹೇಳಿದ್ದಲ್ಲಿ, ಜಿಲ್ಲೆಯನ್ನು ವಿಭಜನೆ ಮಾಡಲು ಕಾರಣವೇನು?

ಈ) ಜಿಲ್ಲೆಯನ್ನು ವಿಭಜನೆ ಮಾಡುವ ಬಗ್ಗೆ ಜಿಲ್ಲೆಯಾದ್ಯಂತ ಸಾರ್ವಜನಿಕರುಗಳಿಂದ ಪ್ರತಿಭಟನೆ ಮತ್ತು ಮನವಿಗಳೇನಾದರೂ ಬಂದಿವೆಯೇ. ಬಂದಿದ್ದಲ್ಲಿ, ಸರ್ಕಾರ ಇದನ್ನು ಪುನರ್-ಪರಿಶೀಲಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಶ್ರೀ ವಾಸುದೇವರಾವ್ ಸಮಿತಿಯು ಹೊಸದಾಗಿ 2 ಜಿಲ್ಲೆಗಳು 7 ಉಪ-ವಿಭಾಗಗಳು ಹಾಗೂ 17 ತಾಲ್ಲೂಕುಗಳನ್ನು ರಚಿಸಲು ಶಿಫಾರಸ್ಸು ಮಾಡಿದೆ.

ಶ್ರೀ ಟಿ.ಎಂ. ಹುಂಡೇಕರ್ ಸಮಿತಿಯು ಹೊಸದಾಗಿ 3 ವಿಭಾಗಗಳು 8 ಜಿಲ್ಲೆಗಳು 21 ಉಪ-ವಿಭಾಗಗಳು ಹಾಗೂ 27 ತಾಲ್ಲೂಕುಗಳನ್ನು ರಚಿಸಲು ಶಿಫಾರಸ್ಸು ಮಾಡಿದೆ.

ಶ್ರೀ ಪಿ.ಸಿ. ಗದ್ದೀಗೌಡರ್ ಸಮಿತಿಯು ಹೊಸದಾಗಿ 3 ವಿಭಾಗಗಳು 9 ಜಿಲ್ಲೆಗಳು 21 ಉಪ-ವಿಭಾಗಗಳು ಹಾಗೂ 30 ತಾಲ್ಲೂಕುಗಳನ್ನು ರಚಿಸಲು ಶಿಫಾರಸ್ಸು ಮಾಡಿದೆ.

ಆ) ತಾಲ್ಲೂಕುಗಳು ಹಾಗೂ ಜಿಲ್ಲೆಗಳು ಎರಡನ್ನು ವಿಂಗಡಣೆ ಮಾಡಲು ಶಿಫಾರಸ್ಸು ಮಾಡಿವೆ.

ಇ) ಪ್ರಶ್ನೆ - (ಆ)ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಈ) ಮನವಿಗಳು ಬಂದಿದ್ದು ಅವು ಸರ್ಕಾರದ ಪರಿಶೀಲನೆಯಲ್ಲಿವೆ.